




# ರಾಜ್‌ಕೋಟ್ ಆಶ್ರಮದಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ

ರಾಜ್‌ಕೋಟ್ ಆಶ್ರಮವು ೨೦೧೮ರ ಆಗಸ್ಟ್ ೪ ರಂದು ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ೧೨೫ನೇ ವಾರ್ಷಿಕೋತ್ಸವದ ಅಂಗವಾಗಿ ಒಂದು ದಿನದ **ರಾಷ್ಟ್ರೀಯ ವಿಚಾರ ಸಂಕಿರಣ**ವನ್ನು ಏರ್ಪಡಿಸಿತು. ಆಶ್ರಮದ 'ವಿವೇಕಾನಂದ ನೈತಿಕ ಶಿಕ್ಷಣ ಹಾಗೂ ಸಾಂಸ್ಕೃತಿಕ ಸಂಸ್ಥೆ'ಯ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗುಜರಾತ್ ಹಾಗೂ ಸಮೀಪದ ಇತರ ರಾಜ್ಯಗಳಿಂದ ಬಂದ ಸುಮಾರು ೨೦೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

ವೇದಘೋಷಗಳೊಂದಿಗೆ ಈ ವಿಚಾರ ಸಂಕಿರಣ ಆರಂಭವಾಯಿತು. ಆಶ್ರಮದ ಸಂನ್ಯಾಸಿ, ಬ್ರಹ್ಮಚಾರಿಗಳು ಇದನ್ನು ನಡೆಸಿಕೊಟ್ಟರು. ಹಲವು ಮಂದಿ ಭಾಷಣಕಾರರ ಸಾನ್ನಿಧ್ಯದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿಖಿಲೇಶ್ವರಾನಂದರು ಸ್ವಾಗತಿಸಿದರು. ನಂತರ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸಂದೇಶವನ್ನು ಓದಲಾಯಿತು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಸಹಕಾರ್ಯದರ್ಶಿಗಳಾದ ಸ್ವಾಮಿ ಬಲಭದ್ರಾನಂದರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಬರೋಡಾದಲ್ಲಿರುವ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಬರೋಡಾ ರಾಜಮಾತಾ ಶುಭಾಂಗಿನಿ ರಾಜೇ ಗಾಯಕ್‌ವಾಡ್ ಮುಖ್ಯ ಅತಿಥಿಗಳಾಗಿದ್ದರು. ಸೌರಾಷ್ಟ್ರ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ. ನಿತಿನ್‌ಕುಮಾರ್ ಪೇತಾಣಿಯವರು ಭಾಷಣ ಮಾಡಿದರು.

ಮುಂದಿನ ಗೋಷ್ಠಿಯಲ್ಲಿ ನಾಲ್ಕು ಪ್ರಮುಖ ಭಾಷಣಗಳು ನಡೆದವು: ೧) ವಿವೇಕಾನಂದ ವಿದ್ಯಾಪೀಠ, ರಾಯಪುರ, ಛತ್ತೀಸಗಢ ಇದರ ಸಂಸ್ಥಾಪಕ ಕಾರ್ಯದರ್ಶಿಗಳಾದ ಡಾ. ಓಂಪ್ರಕಾಶ್ ವರ್ಮಾ ಅವರಿಂದ ೨) 'ಪ್ರಬುದ್ಧ ಭಾರತ' ಸಂಪಾದಕರಾದ ಸ್ವಾಮಿ ನರಸಿಂಹಾನಂದಜಿ ಮಹಾರಾಜ್ ಅವರಿಂದ ೩) ಕಾನ್ಪುರ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ಆತ್ಮಶ್ರದ್ಧಾನಂದಜಿ ಅವರಿಂದ, ಹಾಗೂ ೪) ದೆಹಲಿ ವಿಶ್ವವಿದ್ಯಾನಿಲಯದ ಮೇನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಮುಖ್ಯಸ್ಥೆಯಾದ ಡಾ. ಸುನೀತಾ ಸಿಂಗ್ ಸೇನಗುಪ್ತಾ ಅವರಿಂದ.

ಮಧ್ಯಾಹ್ನ ಭೋಜನದ ನಂತರ ನಡೆದ ಗೋಷ್ಠಿಯಲ್ಲಿ ನಾಲ್ಕು ಭಾಷಣಗಳು ನಡೆದವು. ೧) ಶ್ರೀ ಶರದ್ ಸಾಗರ್ ಅವರಿಂದ ಹಿಂದೀ ಭಾಷಣ, ೨) ಡಾ. ಜಯೇಶ್ ಷಾ ಅವರಿಂದ ಗುಜರಾತಿ ಭಾಷಣ, ೩) 'ಪರಿವಾರ್' ಸಂಸ್ಥೆಯ ಸ್ಥಾಪಕರಾದ ಶ್ರೀ ವಿನಾಯಕ ಲೋಹಾನಿ ಅವರಿಂದ ಹಿಂದೀ ಭಾಷಣ, ಹಾಗೂ ೪) ಪ್ರಸಿದ್ಧ ಗುಜರಾತೀ ಲೇಖಕಿ ಶ್ರೀಮತಿ ಜ್ಯೋತಿಬೆನ್ ಥಂಕಿ ಅವರಿಂದ ಗುಜರಾತೀ ಭಾಷಣ.

ಸಮಾರೋಪ ಸಮಾರಂಭದಲ್ಲಿ ಸ್ವಾಮಿ ನಿಖಿಲೇಶ್ವರಾನಂದರು ಸಮಾಪನ ಭಾಷಣ ಮಾಡಿದರು. ಸ್ವಾಮಿ ಪ್ರಭುಸೇವಾನಂದರು ವಂದಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳಿಗೆ ಪುಸ್ತಕರೂಪದ ಉಡುಗೊರೆ ನೀಡಲಾಯಿತು. ಈ ಕಾರ್ಯಕ್ರಮಗಳನ್ನು ಭಾಗಶಃ ಬೇಲೂರು ಮಠದ ಆರ್ಥಿಕ ನೆರವಿನಿಂದ ಆಯೋಜಿಸಲಾಗಿತ್ತು .







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020